# ಮಕ್ಕಳಿಗಾಗಿ ಬೈಬಲ್

**ಅರ್ಪಿಸುವ**

# ಸಮುದ್ರದ ಬಿರುಗಾಳಿಯನ್ನು ಶಾಂತಪಡಿಸಿದನು




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol

Alastair Paterson



ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.






ಯೇಸು ಮತ್ತು ಶಿಷ್ಯರು ದೋಣಿಯಲ್ಲಿ ಪ್ರಯಾಣವನ್ನು ಮಾಡುವಾಗ ಒಂದು ದೊಡ್ಡ ಬಿರುಗಾಳಿ ಗಲೀಲಯದ ಕಡೆಯಿಂದ ಬೀಸಿದ್ದರಿಂದ ದೋಣಿಯೂ ಒಡೆದು ಹೋಗುತ್ತದೆಯೋ ಎನ್ನುವಂತಾಗಿತ್ತು.

ಗಾಳಿ ಬೀಸುವ ಹೊಡೆತವನ್ನು ನೋಡಿ ಗಾಭರಿಗೊಂಡರು ದೋಣಿಯು ತರೆಗಳಿಂದ ಮುಚ್ಚಿ ಹೋಯಿತು, ಆದರೆ ಯೇಸುವು ಗಾಡವಾದ ನಿದ್ರೆಯಲ್ಲಿದ್ದರು. ಆಗ ಶಿಷ್ಯರು, ಗುರುವೇ! ಗುರುವೇ! ನಾವು ಸಾಯುತ್ತಿದ್ದೇವೆ ಎಂದು ಕೂಗಿದರು.



3

ಯೇಸು ತನ್ನ ಶಿಷ್ಯರಿಗೆ ಹೇಳಿದ್ದೆನೆಂದರೆ, ಎಲ್ಲೈ ಅಲ್ಪ ವಿಶ್ವಾಸಿಗಳೇ ಏಕೆ ಸಂದೇಹ ಪಡುತ್ತೀರಿ? ಎಂದು ಹೇಳಿ ಗಾಳಿಗೂ ಮತ್ತು ಅಲೆಗಳಿಗೂ ಯೇಸುವು ಅಪ್ಪಣೆಯನ್ನು ಕೊಡಲು ಅದು ನಿಂತು ಹೋಯಿತು.



4

ಗಾಳಿಯು ನಿಂತು ಸಮುದ್ರವು ಶಾಂತವಾಯಿತು. ಅದನ್ನು ನೋಡಿ ಶಿಷ್ಯರು ಆಶ್ಚರ್ಯಪಟ್ಟು ಈತನು ಯಾರಿರಬಹುದು ಗಾಳಿಯು, ಸಮುದ್ರವು ಈತನ ಮಾತನ್ನು ಕೇಳುತ್ತದೆಯಲ್ಲ ಅಂದುಕೊಂಡರು.



5

ಕೆಲವು ದಿನಗಳ ನಂತರ ಯೇಸು ಕಾರ್ಯನಿರತರಾದರು ಒಬ್ಬ ಸಣ್ಣ ಹುಡುಗನು ತಂದಿದ್ದ ಮದ್ಯಾಹ್ನದ ಊಟದಿಂದ ಆರಣ್ಯದಲ್ಲಿ ೫೦೦೦ ಜನರಿಗೆ ಊಟವನ್ನು ಕೊಟ್ಟರು ದೇವರ ಶಕ್ತಿಯ ಮೂಲಕವಾಗಿ. ಸಂಜೆ ಅವರನ್ನು ಮನೆಗೆ ಕಳಿಸಿದರು.



6

ಯೇಸುವನ್ನು ಬಿಟ್ಟು ಶಿಷ್ಯರು ಆತನಿಗಿಂತ ಮೊದಲು ಗಲೀಲಾಯ ಸಮುದ್ರದ ಆಚೆ ದಡಕ್ಕೆ ಹೋಗಲು ಅಪ್ಪಣೆಯನ್ನು ಕೊಟ್ಟನು, ಅವರು ದೋಣಿಯನ್ನು ಹತ್ತಿ ಹೊರಟರು.



7



ಯೇಸುವು ಎಲ್ಲರನ್ನು ಕಳಿಸಿದ ನಂತರ, ಆತನು ಬೆಟ್ಟವನ್ನು ಹತ್ತಿ ಒಬ್ಬಂಟಿಗನಾಗಿ ಪ್ರಾರ್ಥನೆಯನ್ನು ಮಾಡಲು ಹೋದನು.

8



ಸಮುದ್ರದ ಮದ್ಯದಲ್ಲಿ ಶಿಷ್ಯರು ಗಾಳಿಯಲ್ಲಿ ಸಿಕ್ಕಿಕೊಂಡರು, ಆ ಗಾಳಿಯು ಅವರನ್ನು ಮುಂದೆ ಹೋಗುವುದಕ್ಕೆ ಬಿಡದೆ ಅಲ್ಲೆ ಕೆಲವು ಘಂಟೆಗಳ ಕಾಲ ಸುತ್ತಾಡಿಸಿತು. ಶಿಷ್ಯರಿಗೆ ತಿಳಿಯದಿದ್ದರು ಅವರು ಒಂದು ದೊಡ್ಡ ಆಶ್ಚರ್ಯಕ್ಕೆಗೊಳಗಾದರು.

9



ಮುಂಜಾನೆ ೬ ಘಂಟೆಯ ಸಮಯದಲ್ಲಿ ಸಮುದ್ರದ ಮದ್ಯದಲ್ಲಿ ಗಾಳಿಯಲ್ಲಿ ನುಸುಕೊಂಡು ಹೋಗುವ ಸಂಧರ್ಭದಲ್ಲಿ ಅವರು ಒಂದು ರೀತಿ ಏನೋ ನೋಡಿ ದೆವ್ವ ಎಂದು ಹೆದರಿ ಕೂಗಿದರು. ಅದರೆ ಅದು ಕರ್ತನಾದ ಯೇಸು ಆಗಿದ್ದರು ಅವರು ನೀರಿನ ಮೇಲೆ ನಡೆದು ಅವರ ಬಳಿಗೆ ಬರುತ್ತಿದ್ದರು.

10

ಯೇಸು ಅವರನ್ನು ಕರೆದು ದೈರ್ಯವಾಗಿರಿ, ಹೇದರಬೇಡಿರಿ!! ಅದು ನಾನೇ ಎಂದರು ಅದನ್ನು ಕೇಳಿದ. ಪೇತ್ರನು, ‘ಸ್ವಾಮಿ ನೀವೇ ಆಗಿದ್ದರೆ ನನಗೂ ಸಹಾ ನೀರಿನ ಮೇಲೆ ನಡದು ಬರುವುದಕ್ಕೆ ಅಪ್ಪಣೆಯನ್ನು ಕೊಡಿರಿ’ ಅಂದನು. ಆಗ ಯೇಸು ದೈರ್ಯವಾಗಿ ಬಾ ಎಂದರು, ಪೇತ್ರನು ದೋಣಿಯಿಂದ ಇಳಿದು ನೀರಿನ ಮೇಲೆ ನೆಡದು ಯೇಸುವಿನ ಬಳಿಗೆ ಹೋರಟನು.



11



ಹಾಗೆ ಹೋಗುವಾಗ ಗಾಳಿಯ ಅಬ್ಬರವನ್ನು ನೋಡಿ ಹೇದರಿ ಮುಳುಗಲು ಪ್ರಾರಂಭಿಸಿದಾಗ ಯೇಸುವೇ ನನ್ನನ್ನು ರಕ್ಷಿಸು ಎಂದು ಕೂಗಿದನು.

12

ಆಗ ಯೇಸುವು ಪೇತ್ರನಿಗೆ ‘ಓ ಅಲ್ಪ ವಿಶ್ವಾಸಿಯೇ ಏಕೆ ಸಂದೇಹಪಟ್ಟೆ’ ಎಂದು ಹೇಳಿ ಆತನ ಕೈ ಹಿಡಿದು ಮೇಲಕ್ಕೆ ಎತ್ತಿದ್ದನು. ಅವರು ಇಬ್ಬರು ಸೇರಿ ದೋಣಿಯನ್ನು ಹತ್ತಿದರು, ಗಾಳಿಯ ಅಬ್ಬರ ನಿಂತು ಹೋಯಿತು.



13



ದೋಣಿಯಲ್ಲಿರುವ ಉಳಿದವರೆಲ್ಲರು, ಯೇಸುವನ್ನು ಆರಾಧಿಸಿ ‘ಈತನು ನಿಜವಾಗಿಯೂ ದೇವರ ಮಗನು’ ಎಂದರು.

14

## ಸಮುದ್ರದ ಬಿರುಗಾಳಿಯನ್ನು ಶಾಂತಪಡಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮತ್ತಾಯ **8**, ಮತ್ತಾಯ **14**, ಮಾರ್ಕ **4**, ಲೂಕ **8**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**



# ಮುಕ್ತಾಯ

48 60



ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
**ಯೋಹಾನ 3:16**